ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ,
ಮಡಿಕೇರಿ.

**ಒ.ಎಸ್.ನಂಃ 39/2021**

ಪಿಡಬ್ಲ್ಯುಃ -1

ದಿನಾಂಕಃ09.06.2026ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ 1 ಮತ್ತು 2 ರವರ ಪರ ವಕೀಲರಾದ ಶ್ರೀ. ಜಿ ಆರ್ ಆರ್ ರವರಿಂದಃ- ಏನೂ ಇಲ್ಲ.

ಪಾಟೀ ಸವಾಲುಃ ಪ್ರತಿವಾದಿ 3 ರಿಂದ 5 ರವರ ಪರ ವಕೀಲರಾದ ಶ್ರೀ. ಎಂ ಈ ಎಂ ರವರಿಂದಃ-

ನಿಪಿ-13 ರ ಬಾಪ್ತು ನಾನು ನಾಪೋಕ್ಲು ಪೊಲೀಸ್ ಠಾಣೆಗೆ ನೀಡಿದ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿ. ನಿಪಿ-13 ದಾಖಲೆಯಲ್ಲಿ ದಿಃ 03.02.2021 ಎಂದು ನಮೂದು ಇದ್ದು, ಸದರಿ ದಿನಾಂಕದಂದು ಪೊಲೀಸರು ಏನು ತೀರ್ಮಾನ ಮಾಡಿದರು ಎಂದು ಹೇಳಲು ನಾನು ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ಪೊಲೀಸ್ ಠಾಣೆಯಲ್ಲಿ ಪ್ರಕರಣ ಇತ್ಯರ್ಥ ಆದರೆ ಪೊಲೀಸರು ಅದಕ್ಕೆ ಹಿಂಬರಹ ನೀಡುತ್ತಾರೆ ಎಂದರೆ ಸರಿ. ನಿಪಿ-13 ದಾಖಲೆಗೆ ಸಂಬಂಧಪಟ್ಟಂತೆ ನಾನು ಪೊಲೀಸರು ನೀಡಿದ ಹಿಂಬರಹ ಹಾಜರು ಪಡಿಸಿಲ್ಲ ಎಂದರೆ ಸರಿ.

ನಿಪಿ-14 ಸ್ವೀಕೃತಿ ಪತ್ರ ದಿಃ 28.11.2022 ಕ್ಕೆ ಸಂಬಂಧ ಪಟ್ಟಿದ್ದು ಎಂದರೆ ಸರಿ. ನಿಪಿ-14 ರ ಬಾಪ್ತು ನಾನು ನಾಪೋಕ್ಲು ಪೊಲೀಸ್ ಠಾಣೆಗೆ ನೀಡಿದ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿ. ನಿಪಿ-4 ರ ಅನ್ವಯ ಪೊಲೀಸರು ಏನು ತೀರ್ಮಾನ ಮಾಡಿದರು ಎಂದು ಹೇಳಲು ನಾನು ಹಿಂಬರಹ ಹಾಜರು ಪಡಿಸಿಲ್ಲ ಎಂದರೆ ಸರಿ. ನಿಪಿ-13 ದಾಖಲೆಗೂ ನಿಪಿ-14 ದಾಖಲೆಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಗೋಸ್ಕರ ಪೊಲೀಸರ ಮೇಲೆ ಪ್ರಭಾವ ಬೀರಿ ನಿಪಿ-13 ಮತ್ತು 14 ದಾಖಲೆಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಪ್ರತಿವಾದಿ 3 ರಿಂದ 5 ರವರನ್ನು ಠಾಣೆಗೆ ಕರೆಸದೆ ಇರುವುದರಿಂದ ನಾನು ಹಿಂಬರಹಗಳನ್ನು ಹಾಜರು ಪಡಿಸಿಲ್ಲ

ಎಂದರೆ ಸರಿ. ನಿಪಿ–13 ಮತ್ತು 14 ದಾಖಲೆಗಳು ಈ ದಾವೆಗೆ ಸಂಬಂಧ ಪಟ್ಟಿದ್ದಲ್ಲ ಎದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.
ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.
ಸಹಿ/–
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ. ಎಫ್. ಸಿ., ಮಡಿಕೇರಿ.**